ನೀರಿನ ಪ್ರಮಾಣ ಕಡಿಮೆಯಾಗಿರುವುದರಿಂದ ನೀರು ಸರಬರಾಜು ವ್ಯವಸ್ಥೆಯನ್ನು 1 ರಿಂದ 2 ಗಂಟೆಯವರೆಗೆ ಕಡಿಮೆಗೊಳಿಸಲಾಗಿದೆ. ಪ್ರದೇಶದಲ್ಲಿ ಜನಸಾಂದ್ರತೆ ದಟ್ಟವಾಗಿದ್ದು ಸುಮಾರು 25 ಸಾರ್ವಜನಿಕ ನಲ್ಲಿಗಳು ಇರುವುದರಿಂದಲೂ ಸರಬರಾಜು ಮಾಡುವ ನೀರಿನಲ್ಲಿ ಒತ್ತಡ ಕಡಿಮೆಯಾಗಿದ್ದು ಇಲ್ಲಿನ ನಿವಾಸಿಗಳಿಗೆ ನೀರಿನ ಅಭಾವ ಉಂಟಾಗಿದೆ. ಸುಮಾರು ಏಳೆಂಟು ಮನೆಗಳಿಗೆ ತೀವ್ರ ಅಭಾವ ಉಂಟಾಗಿದೆ. ಇತರ ಮನೆಗಳಿಗೆ ಕಡಿಮೆ ಒತ್ತಡದಲ್ಲಿ ನೀರು ಬರುತ್ತದೆ. ಈ ಅಭಾವ ತಾತ್ಕಾಲಿಕವಾಗಿದ್ದು ತಿಪ್ಪಗೊಂಡನಹಳ್ಳಿ ಜಲಾಶಯದ ನೀರಿನ ಮಟ್ಟ ಉತ್ತಮಗೊಂಡಿಲ್ಲ ಮೊದಲಿನ ಸಹಜ ಸ್ಥಿತಿಯಲ್ಲಿ ನೀರು ಸರಬರಾಜು ಮಾಡಲಾಗುವುದು. ಈ ನಿವಾಸಗಳಿಗೆ ನೀರು ಬಾರದ ಅಥವಾ ಕಡಿಮೆ ಸರಬರಾಜು ಆದ ದಿನಗಳಲ್ಲಿ ಲಾರಿ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ.

ಮೇಲ್ಕಂಡ ಹತ್ತನೇ ಅಡ್ಡ ರಸ್ತೆಯು ಅತಿ ಕಿರಿದಾಗಿದ್ದು ಸದರಿ ಮನೆಗಳಿಗೆ ಲಾರಿಮೂಲಕ ನೀರು ಸರಬರಾಜು ಮಾಡುವುದಕ್ಕೂ ಸಾಧ್ಯವಿರುವುದಿಲ್ಲದ ಕಾರಣ ಈ ನಿವಾಸಿಗಳು ಈ ಅಡ್ಡರಸ್ತೆಯ ಕೊನೆಯಿಂದ ನೀರು ಸರಬರಾಜು ವ್ಯವಸ್ಥೆ ಉತ್ತಮವಾಗುವವರೆಗೆ ಲಾರಿ ಮೂಲಕ ಕಳುಹಿಸುವ ನೀರನ್ನು ಪಡೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಬೆಂಗಳೂರು ಜಲಮಂಡಲಿಯು ಈಗಾಗಲೇ ಸೂಕ್ತ ಏರ್ಪಾಡನ್ನು ಮಾಡಿದೆ.

3) **ಶ್ರೀ ರಂಗಪಟ್ಟಣ ಮುನಿಸಿಪಾಲಿಟಿ ಅಭಿವೃದ್ಧಿಮಂಡಳಿಗೆ 2 ಲಕ್ಷ ಅನುದಾನ ಬಿಡುಗಡೆ ಮಾಡುವುದು.**

Smt Daamayanthi Boregowda (Srirangapatana): Madem Deputy Speaker, the Srirangapatna Town is a Tourist Centre of historical importance. the Town Municipal Council cannot levy charges on the Buses or collect any type of taxes from the Tourists. But it has to spend much on the civic amenties. The Council has requested the Government for grant for improvements to the Town. I request the Minister to sanction Rs.2/-lakhs to Srirangapatna Municipality.

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಬಿವೃದ್ಧಿ ಸಚಿವರು):

ಮಾನ್ಯ ಉಪಾಧ್ಯಕ್ಷರೇ ಶ್ರೀರಂಗಪಟ್ಟಣದ ಪುರಸಭೆಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಜಿಲ್ಲಾಧಿಕಾರಿಗಳಿಂದ ಮತ್ತು ಶಾಸಕರಿಂದ ಮತ್ತು ಪುರಸಭೆಯಿಂದ ಹಣವನ್ನು ಬಿಡುಗಡೆ ಮಾಡುವಂತೆ ಮನವಿಗಳು ಸರ್ಕಾರಕ್ಕೆ ಬಂದಿರುತ್ತದೆ. ಈ ತಿಂಗಳ ಅಂತ್ಯದೊಳಗಾಗಿ ನಗರ ಪುರಸಭೆಗಳ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ವಿವೇಚನಾತ್ಮಕ ಅನುದಾನದಿಂದ ಶ್ರೀರಂಗಪಟ್ಟಣಕ್ಕೆ ಹಣವನ್ನು ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಲಾಗುವುದು.

ಉಪಾಧ್ಯಕ್ಷಣೆಯವರು : ಶ್ರೀಯುತ ವೆಂಕಟೇಶ ಗೈರು ಹಾಜರಿ

ಶ್ರೀಯುತ ಶಫಿಅಹಮದ್ ಗೈರು ಹಾಜರಿ

ಶ್ರೀಮತಿ ಸುಮಾವಸಂತ್ ಗೈರು ಹಾಜರಿ

4) **ಬೆಂಗಳೂರು ವಿಶ್ವವಿದ್ಯಾಲಯದಲ್ಲಿರುವ ರೀಸರ್ಚ್ ಅಸಿಸ್ಟೆಂಟುಗಳನ್ನು ಉಪನ್ಯಾಸಕರುಗಳಾಗಿ ಖಾಯಂ ಗೊಳಿಸುವುದು.**

SRI T. B. JAYACHANDRA (KALLAMBELLA) MADEM DEPUTY SPEAKER, The statutes governing the absorption of Research Assistant as Lectrer in the post-Graduste Departments of Bangalore University was approved by the Senate, Syndicate and Finance Committee. The above resolutions were sent to the Government to obtain the Chancllor's assent on 23.3.1988, so far